**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 871/23**

ಪ್ರಾಸಾ3
ಚಾಸಾ3

ಸಾಕ್ಷಿಯ ಹೆಸರುಃ ಅನಂತನಾರಯಣ
ತಂದೆ /ಗಂಡನ ಹೆಸರು ಃ ಕೃಷ್ಣಪ್ಪ
ವಯಸ್ಸು ಃ **36**
ಉದ್ಯೋಗ ಃ ವ್ಯಾಪಾರ
ವಾಸ ಸ್ಥಳ ಃ ಮುಳ್ಳುಸೋಗೆ , ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 28.02.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ಈ ಕೇಸಿನ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೆ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ಮಹಜರನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**2** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**2** ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ **18** ಎಂದು ಗುರುತಿಸಲಾಯಿತು. ನಿಪಿ- **2** ಕ್ಕೆ ಸುಮಾರು ಒಂದು ವರ್ಷದ ಹಿಂದೆ ನನ್ನ ಸ್ವಂತ ಕೆಲಸದ ನಿಮಿತ್ತ ಕುಶಾಲನಗರ ಪೊಲೀಸ್ ಠಾಣೆಗೆ ಹೋದಾಗ ಸಹಿ ಮಾಡಿರುತ್ತೇನೆ ಮತ್ತು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಪೊಲೀಸರು ಸಹ ಓದಿ ತಿಳಿಸಿರುವುದಿಲ್ಲ.

(ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ವಾದ ವಿವಾದ ಆಲಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದೆ. ಅನುಮತಿಸಿದೆ.)

ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದ

ದಿಃ **04.03.2023** ರಂದು ಈ ಪ್ರಕರಣದ ವಿಚಾರವನ್ನು ಚಾಸಾ **4** ರಿಂದ **8** ರವರು ನನಗೆ ತಿಳಿಸಿದ್ದು ನಂತರ ಪೋಲಿಸರು ನನ್ನನ್ನು ಮತ್ತು ಚಾಸಾ **3** ರವರನ್ನು ಕರೆದು ಮಹಜರಗೆ ಸಹಕರಿಸುವಂತೆ ಕೋರಿಕಲೊಂಡ ಮೇರೆಗೆ ಅದಕ್ಕೆ ನಾವು ಒಪ್ಪಿದ್ದು ಸ್ಥಳದಲ್ಲಿ ಟಾಟಾ ಏಸ್ ಗೂಡ್ಸ್ ವಾಹನ ಇದ್ದು ಅದರ ನೋಂದಣಿ ಸಂಖ್ಯೆ ಕೆ ಎ **19** ಟಿ ಸಿ **03202223** ತಾತ್ಕಲಿಕ ನೊಂದಾಯಿುತ ಆಗಿದ್ದು ಅದರಲ್ಲಿ ಜಾನುವಾರುಗಳನ್ನು ತುಂಬಿಸಿಕೊಂಡು ಸಾಗಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಕಂದು ಬಣ್ಣದ ಒಂದು ಕರು , ಕಪ್ಪು ಬಿಳಿ ಬಣ್ಣದ ಹೋರಿ ಕರು , ಬಿಳಿ ಬಣ್ಣದ ಕಪ್ಪು ಬಣ್ಣದ **3** ಇಂಚು ಕೊಂಬು ಇರುವ ಹೋರಿ ಕರು , ಕಪ್ಪು ಬಿಳಿ ಬಣ್ಣದ **4** ಇಂಚು ಕೊಂಬು ಇರುವ ಹಸು , ಕಂದು ಬಣ್ಣದ **6** ಇಂಚಿನ ಕೊಂಬುಗಳು ಇರುವ ಹಸು , ಕಂದು ಬಣ್ಣದ **6** ಇಂಚಿನ **2** ಕೊಂಬುಗಳು ಇರುವ ಹಸು ಇತ್ತು ಎಂದರೆ ಸರಿಯಲ್ಲ. ನಂತರ ಪೋಲಿಸರು ಗೂಡ್ಸ್ ವಾಹನ ಸಮೇತ ಜಾನುವಾರುಗಳನ್ನು ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರನ್ನು ಬೆಳಗ್ಗೆ **6.30-7.30** ಲ್ಯಾಪ್ ಟಾಪನಲ್ಲಿ ಟೈಪ್ ಮಾಡಿದ್ದು ನಂತರ ಪೋಲಿಸ್ ಠಾಣೆಯಲ್ಲಿ ಪ್ರಿಂಟ್ ಮಾಡಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಕೇಳಿಸಿಕೊಂಡ ನಿಪಿ**-18** ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.